# ತ್ಯಾಗ ಮತ್ತು ಭೋಗ

ಸಾಮಾನ್ಯವಾಗಿ ನಾವು ತ್ಯಾಗ ಮತ್ತು ಭೋಗಗಳನ್ನು ಪರಸ್ಪರ ವಿರೋಧಿಗಳೆಂದು ಪರಿಗಣಿಸುತ್ತೇವೆ. ತ್ಯಾಗಿಯಾದವನು ಭೋಗಾಪೇಕ್ಷೆಯಿಂದ ದೂರವಿರುತ್ತಾನೆ; ಭೋಗಿಯಾದವನು ತ್ಯಾಗ ಶೀಲನಾಗಿರಲಾರ ಎಂಬುದು ನಮ್ಮ ಸಾಮಾನ್ಯ ಗ್ರಹಿಕೆ. ಆದರೆ ವಾಸ್ತವವಾಗಿ ತ್ಯಾಗ ಭೋಗಗಳೆರಡೂ ವಿರುದ್ಧ ಧ್ರುವಗಳಲ್ಲಿರಬೇಕಾಗಿಲ್ಲ. ಅವು ಪರಸ್ಪರ ಪೂರಕ ಹಾಗೂ ಪೋಷಕಗಳಾಗಿದ್ದರೆ ಲೋಕ ಜೀವನದ ರಥ ಸರಾಗವಾಗಿ ಚಲಿಸುತ್ತದೆ. ಬದುಕು ಕರುಣಿಸುವ ಎಲ್ಲ ಸುಖ ಸಂತೋಷಗಳನ್ನೂ ತಿರಸ್ಕರಿಸಿ, ಪ್ರಾಪಂಚಿಕವಾದುದೆಲ್ಲವನ್ನೂ ತ್ಯಜಿಸಿ, ಪರಮ ವಿರಾಗಿಗಳಾಗಿ ಬದುಕುವಂಥವರೂ ಇದ್ದಾರೆ, ನಿಜ. ಆದರೆ ಅಂಥ ಬದುಕು ಸಾರ್ವತ್ರಿಕವಾಗಲಾರದು. ಈಶಾವಾಸ್ಯ ಉಪನಿಷತ್ತು 'ತೇನ ತ್ಯಕ್ತೇನ ಭುಂಜೀಥಾಃ' ಎನ್ನುತ್ತದೆ. 'ತ್ಯಜಿಸಿ ಭುಜಿಸು' ಅಥವಾ 'ತ್ಯಾಗದಿಂದ ಅನುಭವಿಸು' ಎಂದು ಇದರ ಅರ್ಥ. ಇದೊಂದು ವಿರೋಧಾಭಾಸದ ಹೇಳಿಕೆ ಎನ್ನಿಸೀತು, ತ್ಯಾಗ ಮಾಡಿ, ಅನಂತರ ಅನುಭವಿಸುವುದಾದರೂ ಹೇಗೆ?– ಎಂಬ ಪ್ರಶ್ನೆ ಕಾಣಿಸಿಕೊಳ್ಳುವುದು ಸಹಜ. ಭೋಗಿಸ ಬೇಕೆನ್ನುವವನು ಭೋಗ್ಯ ವಸ್ತುಗಳನ್ನು ಸಂಗ್ರಹಿಸಿಕೊಂಡಿರಬೇಕಲ್ಲವೆ? ಹೀಗೆ ಸಂಚಯವಾಗಿರುವುದನ್ನೆಲ್ಲ ಹಂಚಿಯೋ, ತ್ಯಜಿಸಿಯೋ ಇಲ್ಲವಾಗಿಸಿಕೊಂಡರೆ ಭೋಗಕ್ಕೆಲ್ಲ ಅವಕಾಶ? ಉಪನಿಷತ್ತು ಹೇಳುವಂತೆ 'ತ್ಯಜಿಸಿ ಭುಜಿಸು'ವುದಾದರೂ ಹೇಗೆ?

'ತೇನತ್ಯಕ್ತೇನ ಭುಂಜೀಥಾಃ' ಎಂಬುದರ ಅರ್ಥ ಎಲ್ಲವನ್ನೂ ತ್ಯಜಿಸಿ ಒಣ ಕಟ್ಟಿಗೆಯಂತೆ ಬದುಕು ಎಂದಲ್ಲ. ತ್ಯಾಗ ಭೋಗ ಎರಡರಲ್ಲೂ 'ಅತಿ' ಎಂಬುದು ಬೇಡ, ತ್ಯಾಗದ ಬೆಂಗಾವಲಲ್ಲಿ ಭೋಗವನ್ನು ಬಳಸಿಕೋ– ಎಂಬುದು ಉಪನಿಷತ್ತಿನ ಉಪದೇಶದಲ್ಲಿನ ಧ್ವನಿ. ಅರ್ಥಾತ್ ತ್ಯಾಗದ ಜೊತೆ ಜೊತೆಗೇ ಲೌಕಿಕ ಜೀವನದ ಸವಿಯನ್ನು ಅನುಭವಿಸಬೇಕು ಎನ್ನುವುದು ಇಲ್ಲಿನ ಸಂದೇಶ. ಹಸಿದುಕೊಂಡಿರುವ ವ್ಯಕ್ತಿಗೆ ನಮ್ಮ ಪಾಲಿನ ಆಹಾರದಲ್ಲೇ ಸ್ವಲ್ಪ ಭಾಗ ನೀಡಿ, ಮಿಕ್ಕದ್ದನ್ನು ನಾವು ಊಟ ಮಾಡಿದರೆ, ಅಂಥ ಊಟದಿಂದ ನಮಗಾಗುವ ಆನಂದ ವಿಶಿಷ್ಟವಾದುದು. ಹಸಿದಿದ್ದ ಮನುಷ್ಯನ ಮುಖ ಆಹಾರ ಸೇವನೆಯಿಂದ ಅರಳುತ್ತದೆ. ಆತನ ಆನಂದ ನಮ್ಮ ಆನಂದವನ್ನು ಹಿಗ್ಗಿಸುತ್ತದೆ. 'ಸಂತೋಷಮ್ ಜನಯೇತ್ ಪ್ರಾಜ್ಞ। ತದೇವೇಶ್ವರ ಪೂಜನಮ್' ಎಂಬ ಹೇಳಿಕೆ ಇದನ್ನೇ ಸಮರ್ಥಿಸುತ್ತದೆ. 'ಇತರರಿಗೆ ಸಂತೋಷವನ್ನು ಕೊಡುವುದೇ ನಾವು ಭಗವಂತನಿಗೆ ಸಲ್ಲಿಸುವ ಪೂಜೆ' ಎಂಬ ಈ ಮಾತಿನಲ್ಲಿ ನಮ್ಮ ಸಂತೋಷವಷ್ಟೇ ಮುಖ್ಯವಲ್ಲ, ನಮ್ಮ ಸಹಜೀವಿಗಳೂ ಸಂತೋಷದಿಂದ ಬದುಕಲು ನಾವು ಸಹಕರಿಸಬೇಕು ಎನ್ನುವ ಸೂಚನೆಯಿದೆ.

ಅಂದರೇನಾಯಿತು? 'ಭೋಗ' ಎಂಬುದು ತ್ಯಜಿಸಬೇಕಾದ ಸಂಗತಿಯೇನಲ್ಲ, ಆದರೆ ಅದು ಸ್ವಾರ್ಥದಿಂದ ಕಲುಷಿತವಾಗಬಾರದು ಎಂದಲ್ಲವೆ? ಕವಿ ರತ್ನಾಕರ ವರ್ಣಿ 'ಭರತೇಶ ವೈಭವ' ಕಾವ್ಯದಲ್ಲಿ– 'ಕಾಮಿಸಿ, ಭೋಗಿಸುವವಗೆ ಕರ್ಮಬಂಧ, ಸುಪ್ರೇಮ ಭೋಗಿಗೆ ಬಂಧವುಂಟೆ?' ಎಂದು ಸ್ವಾರ್ಥ ರಹಿತವಾದ ಭೋಗ ಬಂಧನಕ್ಕೆ ಕಾರಣವಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಭೋಗದ ಹಿಂದೆ ಸ್ವಾರ್ಥವಿದ್ದಲ್ಲಿ ಭಯ, ಅಸೂಯೆ, ಕೋಪ, ದ್ವೇಷ– ಇಂಥ ವಿಕಾರಗಳ ಸರಪಳಿಯೇ ಕಾಣಿಸಿಕೊಳ್ಳುತ್ತದೆ. ತನ್ನಲ್ಲಿರುವುದು ತನಗೆ ಮಾತ್ರ ಸಲ್ಲತಕ್ಕದ್ದು ಎಂಬ ಮನೋಭಾವವಿರುವಾತನಿಗೆ, ಅದು ಇನ್ನೊಬ್ಬನ ಪಾಲಾಗಿ ಬಿಡಬಹುದಾದ ಭಯ ಸದಾ ಇರುತ್ತದೆ. ಅಂಥ 'ಇನ್ನೊಬ್ಬನನ್ನು' ದೂರವಿಡಬೇಕೆಂಬ ಅಥವಾ ಇಲ್ಲವಾಗಿಸ ಬೇಕೆಂಬ ವಿಧ್ವಂಸಕ ಪ್ರವೃತ್ತಿ ಅವನಲ್ಲಿ ಕಾಣಿಸಿಕೊಂಡು ಛಲ, ದ್ವೇಷ, ಕ್ರೌರ್ಯ ಮುಂತಾದ ತಾಮಸಗುಣಗಳು ವಿಜೃಂಭಿಸಲು ಕಾರಣವಾಗುತ್ತದೆ. ತನಗೊಬ್ಬನಿಗೇ ರಾಜ್ಯ ಭೋಗ ದಕ್ಕಬೇಕೆನ್ನುವ ದುರ್ಯೋಧನನ ಸ್ವಾರ್ಥದಿಂದಲೇ ಮಹಾಭಾರತದ ಮಹಾದುರಂತ ಘಟಿಸಿತಲ್ಲವೆ? 'ನೆಲಕಿರಿವೆನೆಂದು ಬಗೆದಿರೆ? ಛಲಕಿರಿವೆಂ...' ಎಂಬುದಾಗಿ ರನ್ನ ಕವಿ ದುರ್ಯೋಧನನ ಬಾಯಲ್ಲಿ ಹೇಳಿಸಿದರೂ, ಆ ಛಲಕ್ಕೆ ಕಾರಣ ದುರ್ಯೋಧನನಲ್ಲಿದ್ದ ಸ್ವಾರ್ಥ ಮೂಲವಾದ ಭೋಗಲಾಲಸೆ ಎಂಬುದು ಸುಳ್ಳಲ್ಲ, ದುರ್ಯೋಧನ ರಾಜ್ಯ ಭೋಗವನ್ನು ಅಪೇಕ್ಷಿಸಿದ್ದು ತಪ್ಪಲ್ಲ, ಆದರೆ ರಾಜ್ಯವನ್ನು ಪಾಂಡವರೊಂದಿಗೆ ಹಂಚಿಕೊಂಡು ಅನುಭವಿಸಿದ್ದರೆ, ಕುರುಕ್ಷೇತ್ರವೆಂಬುದು 'ಮಂಗಳ ಕ್ಷೇತ್ರ'ವಾಗುತ್ತಿತ್ತು.

'Live and let live' ಎಂಬುದೇ ತ್ಯಾಗ ಭೋಗಗಳ ಹಿಂದಿನ ಮನೋಧರ್ಮ ವಾದಾಗ ಈ ಪ್ರಪಂಚ ಸುಂದರವಾಗುತ್ತದೆ; ಬದುಕು ಪ್ರಸನ್ನವಾಗುತ್ತದೆ.

■ ವೈನತೇಯ

## ಮಾತೇ ಮುತ್ತು

★ ಮನುಷ್ಯನಲ್ಲಿ ಹಣ ಸಂಪತ್ತು ವೈಭವಗಳಿದ್ದಾಗ ತಾನು ಯಾರಿಗೇನು ಕಡಿಮೆ ಎಂಬ ಅಹಂಕಾರ ಕಾಣಿಸಿಕೊಳ್ಳುತ್ತದೆ. ಆದರೆ ಇದೆಲ್ಲವೂ ಭಗವಂತನ ದಯೆಯಿಂದ ಬಂದದ್ದು, ಬಡಜನರ ಉದ್ಧಾರಕ್ಕೆ ಬಳಸುವುದರಿಂದಲೇ ಅದು ಸಾರ್ಥಕವಾಗುತ್ತದೆ ಎಂಬ ಅರಿವುಂಟಾದಾಗ ಜ್ಞಾನೋದಯವಾಗುತ್ತದೆ.

-ವೀರೇಂದ್ರ ಹೆಗ್ಗಡೆ

★ ಭಯ ಮತ್ತು ಅಜ್ಞಾನವೇ ಮೂಢನಂಬಿಕೆಗಳಿಗೆ ಕಾರಣ. ಇವು ಆತ್ಮವಿಶ್ವಾಸವನ್ನು ನಾಶ ಮಾಡುವುದಲ್ಲದೇ, ಸ್ವತಂತ್ರ ಆಲೋಚನೆಗೆ ಧಕ್ಕೆ ತರುತ್ತವೆ.

-ಎಚ್.ನರಸಿಂಹಯ್ಯ

★ ಮನಸ್ಸಿಗೆ ಹತ್ತಿರದ ಗೆಳೆಯನನ್ನು ಪಡೆದೆ. ಅದರ ಬೆನ್ನಿಗೇ ದುಃಖವನ್ನು ಅವನು ಜತೆಯಲ್ಲಿ ತಂದ.

-ಮೀನಾಕುಮಾರಿ

★ ಸಾಹಿತ್ಯವು ಮನ್ಮಥನ ಹಸ್ತಗತವಾದ ಕುಸುಮಾಯುಧದಂತೆ. ಸುಕೋಮಲವೂ ಮನೋಹರವೂ ಆದ, ವಿಶ್ವ ವಿಜಯಿಯಾದ ಒಂದು ಅಪೂರ್ವ ಆಯುಧ.

-ಎ.ಆರ್.ಕೃಷ್ಣಶಾಸ್ತ್ರಿ

★ ಸಾಲ ತೆಗೆದುಕೊಳ್ಳುವಾಗ ಕೊಡುವವರಿಗೆ ಬಾಗುತ್ತಾರೆ. ವಾಪಸ್ ಕೊಡುವಾಗ ಕೊಟ್ಟವ ಬಾಗುತ್ತಾನೆ!

-ರಷ್ಯನ್ ಗಾದೆ

★ ಬದುಕುತ್ತಿರುವವರು ಯಾರೂ ಸಾವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

-ಪಿ.ಲಂಕೇಶ್

★ ಭಾರತದ ಧರ್ಮವು ಮೂಲಭೂತವಾಗಿ ಪುರಾತನವಾದದ್ದು. ಕಾಲ ಮತ್ತು ನಾಗರಿಕತೆಯಲ್ಲಿ ಪ್ರಗತಿಯಾಗಿದ್ದು, ಅದರ ಗೋತ್ರ ನಿಯಮಗಳು ತನ್ನೆಲ್ಲ ಪೌರೋಹಿತ್ಯ ಬಲದೊಂದಿಗೆ ಇಂದಿಗೂ ಜಾರಿಯಲ್ಲಿವೆ.

-ಬಿ.ಆರ್.ಅಂಬೇಡ್ಕರ್

★ ಸಾಯುತ್ತೇನೆ ಎಂಬ ತಿಳಿವಿನಿಂದ ಬದುಕುವುದು ಭಯಂಕರವಾದರೂ, ನಾವು ಸಾಯುವುದೇ ಇಲ್ಲ ಎಂದು ತಿಳಿದರೆ ಅದು ಸಹಿಸಲಸಾಧ್ಯವಾದದ್ದು.

-ಹೆರಾಲ್ಡ್ ಕುಶ್ನರ್

★ ಸಾವೇ ಎಲ್ಲಕ್ಕಿಂತ ಕೆಟ್ಟದ್ದಲ್ಲ; ಸಾವು ಬೇಕೆಂದು ಆಶಿಸಿ ಪಡೆಯದಿರುವುದು ಎಲ್ಲಕ್ಕಿಂತ ಘೋರ.

-ಸಾಫೋಕ್ಲಿಸ್

★ ಸಾವಿನ ಭಯ ಮುಂದೆ ಬರುವ ಭಯ. ನಾವಿರುವಾಗ ಸಾವಿಲ್ಲ. ಸಾವು ಬಂದಾಗ ನಾವಿಲ್ಲ. ಆದ್ದರಿಂದ ಸಾವಿನ ಭಯಕ್ಕೆ ಅವಕಾಶವಿಲ್ಲ.

-ಎಪಿಕ್ಯುರಸ್

★ ಹೊಮ್ಮಿರಲು ಪ್ರೀತಿ, ಎಲ್ಲಿಯದು ಭೀತಿ? ನಾಡೊಲವೆ ನೀತಿ.

-ಡಿ.ಎಸ್.ಕರ್ಕಿ

★ ಪ್ರಾಣಿಗಳಂತೆ ಬದುಕಬೇಡಿರಿ, ಜೀವಿಗಳಂತೆ ಬಾಳಿರಿ. ಪ್ರಾಣ ಹಿಂಡಿ ಜೀವ ತಿನ್ನಬೇಡಿ, ಜೀವಕ್ಕೆ ಜೀವಕೊಟ್ಟು ಜೀವಿಸಿರಿ– ಇದು ಸಾಹಿತ್ಯದ ಧ್ವನಿ.

-ದ.ರಾ.ಬೇಂದ್ರೆ

★ ಸಾಹಿತ್ಯದ ಪರಮೋದ್ದೇಶ ರಸಾನುಭವ ಎಂದು ನಾನು ನಂಬಿದವನಲ್ಲ; ಜ್ಞಾನಾರ್ಜನೆ ಎಂದೂ ನಂಬಿದವನಲ್ಲ. ಅವೂ ಇವೆ, ನಿಜ. ಆದರೆ ಅದೇ ಮುಖ್ಯವಲ್ಲ. ನನ್ನ ದೃಷ್ಟಿಯಲ್ಲಿ ಸಾಹಿತ್ಯವೂ ನಮ್ಮ ಭಾವ ಭಾವನೆಗಳನ್ನು ಮಾನವೀಯ ಅಂತಃಕರಣ, ಅನುಕಂಪ, ಸಹಾನುಭೂತಿಗಳಿಗೆ ಶೃತಿ ಹಿಡಿಯುವ, ತಿದ್ದಿ ತೀಡಿ ಸಂಸ್ಕಾರಗೊಳಿಸುವ ಮಾಧ್ಯಮ. ಮನುಷ್ಯ ಪ್ರೀತಿಯನ್ನು ಉಳಿಸದ, ಬೆಳೆಸದ, ಸಾಹಿತಿ ಹಾಗೂ ಸಾಹಿತ್ಯ ಇದ್ದರೇನು? ಇಲ್ಲದಿದ್ದರೇನು?

-ಚದುರಂಗ